ಆ) ಭೂ ಕುಸಿತವನ್ನು ಶಾಶ್ವತವಾಗಿ ತಡೆಯಲು ಸರ್ಕಾರದ ಮುಂದೆ ಏನಾದರೂ ಯೋಜನೆ ಇದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು. 1997ರ ಜುಲೈ ತಿಂಗಳಲ್ಲಿ ಸುರಿದ ಮಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಂಟ್ವಾಳ ಮತ್ತು ಬೆಳ್ತಂಗಡಿ ತಾಲ್ಲೂಕಿನ ಸುಮಾರು 6 ರಸ್ತೆಗಳಲ್ಲಿ ಭೂಕುಸಿತ ಉಂಟಾಗಿದ್ದು, ವಾಹನ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ಅದರಲ್ಲಿ ಮಂಗಳೂರು ತಾಲ್ಲೂಕಿನ ಹೊಸಪೇಟೆ ಮಂಗಳೂರಿನಲ್ಲಿ ಆದ ಭೂಕುಸಿತವನ್ನು ಹೊರತು ಪಡಿಸಿ ಉಳಿದ ಎಲ್ಲಾ ರಸ್ತೆಗಳಲ್ಲಿ ಭೂಕುಸಿತದಿಂದ ಬಿದ್ದು ಮಣ್ಣನ್ನು ತೆಗೆದು ವಾಹನಗಳ ಮರು ಸಂಚಾರಕ್ಕೆ ತೆರವು ಮಾಡಲಾಗಿದೆ.

ಹೊಸಪೇಟೆ- ಮಂಗಳೂರು ರಸ್ತೆಯ ವಾಮಂಜೂರುನಲ್ಲಿ ಭೂ ಕುಸಿತದಿಂದಾದ ರಸ್ತೆ ದುರಸ್ತಿ ಕೆಲಸ ಪ್ರಗತಿಯಲ್ಲಿದೆ.

ಆ) ಚಿಂತನೆಯಲ್ಲಿದೆ.

ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತನೆ

1678 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟಕ್ಕೆ ವಿಸ್ತರಿಸಲು ನಿರ್ಧರಿಸಲಾಗಿದೆಯೇ?

ಆ) ಆ ಮಾರ್ಗಗಳು ಯಾವುವು?

ಇ) ಈ ಕಾರ್ಯ ಯಾವಾಗಿನಿಂದ ಪ್ರಾರಂಭಗೊಳ್ಳುವುದು, ಇದಕ್ಕೆ ಮೀಸಲಿಟ್ಟಿರುವ ಹಣವೆಷ್ಟು. ಇದುವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು?

ಈ) ಈ ಕಾರ್ಯ ಯಾವಾಗ ಪೂರ್ಣಗೊಳುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಚಿಂತನೆಯಲ್ಲಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.